



ಬ್ರೆಜಿಲ್ ರಾಜಧಾನಿ ರಿಯೋ ಡಿ ಜನ್ನೈರೊದಲ್ಲಿ ನಡೆಯುವ ಬೀದಿಜಾತ್ರೆ (ಕಾರ್ನಿವಲ್)ಗೆ ಹೋಗಬೇಕೆಂಬುದು ನನ್ನ ಬಹುದಿನಗಳ ಕನಸು. 'ರಿಯೋ' ಎಂಬ ಆನಿಮೇಷನ್ ಸಿನಿಮಾ ನೋಡಿದಾಗ ಅದರಲ್ಲಿ ಕಂಡ ಜಾತ್ರೆಯ ವೈಭೋಗ, ವೇಷಭೂಷಣ, ಅವರ ಉತ್ಸಾಹ ನನ್ನಲ್ಲೂ ಹೊಸ ಚೈತನ್ಯ ತುಂಬಿಸಿತ್ತು. ರಿಯೋ ಕಾರ್ನಿವಲ್ ದೊಡ್ಡ ಜಾತ್ರೆ.

ಕರ್ನಾಟಕದಿಂದ ಬಂದು ಅಮೆರಿಕದಲ್ಲಿ ನೆಲೆ ನಿಂತ ಮೇಲೆ ಬ್ರೆಝಿಲ್‌ಗೆ ಹೋಗುವ ಹಳೇ ಕನಸು ಮತ್ತೆ ಚಿಗುರೊಡೆದಿತ್ತು. ಆದರೆ ಅಮೆರಿಕದಿಂದ ಬ್ರೆಜಿಲ್‌ಗೆ ಹೋಗುವುದೆಂದರೆ ಸಾವಿರಾರು ಮೈಲಿಯ ಪ್ರಯಾಣ! ಸದ್ಯಕ್ಕಂತೂ ಸಾಧ್ಯವಿಲ್ಲ. ಅದೇ ವೇಳೆಗೆ, ಬ್ರೆಜಿಲ್‌ನ ರಿಯೊ ಕಾರ್ನಿವಲ್ ಹೋಲುವಂತಹ ಇನ್ನೊಂದು ಜಾತ್ರೆ ಅಮೆರಿಕದ 'ನ್ಯೂ ಒರ್ಲಿಯಾನ್ಸ್'ನಲ್ಲಿ ನಡೆಯುತ್ತದೆ ಎನ್ನುವುದು ಗೊತ್ತಾಯಿತು. ತಿಂಗಳ ಕಾಲ ನಡೆಯುವ 'ಮಾರ್ಡಿಗ್ರಾಸ್' ಜಾತ್ರೆ ಬಹುತೇಕ ರಿಯೋ ಕಾರ್ನಿವಲ್‌ಅನ್ನೇ ಹೋಲುತ್ತದ ಎಂದು ಸ್ನೇಹಿತರು ಹೇಳಿದರು. ಸರಿ, ಮೊದಲು ಅದನ್ನಾದರೂ ನೋಡೋಣವೆಂದು ಅಲ್ಲಿಗೇ ಹೊರಟೆ.

## ಲೆಂಟ್ ಹಬ್ಬ

ಮಾರ್ಡಿಗ್ರಾಸ್ ಜಾತ್ರೆಗೂ ಲೆಂಟ್ ಧಾರ್ಮಿಕ ಆಚರಣೆಗೂ ನಿಕಟ ನಂಟು. ಲೆಂಟ್ ಆಚರಣೆಗೆ ಒಂದು ಐತಿಹಾಸಿಕ ಹಿನ್ನೆಲೆ ಇದೆ. ಮರುಭೂಮಿಯಲ್ಲಿ ಏಸುಕ್ರಿಸ್ತನು ಮಾಡಿದ ಉಪವಾಸದ ನೆನಪಿಗಾಗಿ ಕ್ರೈಸ್ತರು ಒಂದು ನಿರ್ದಿಷ್ಟ ಅವಧಿಯಲ್ಲಿ ವ್ರತ, ಉಪವಾಸಗಳನ್ನು ಆಚರಿಸುತ್ತಾರೆ. 'ಬೂದಿ ಬುಧವಾರ' ದಿಂದ ಈಸ್ಟರ್ ಹಬ್ಬದ ಹಿಂದಿನ ದಿನದವರೆಗಿನ 40 ದಿನಗಳ ಕಾಲ ಇದು ಅಚರಣೆಯಲ್ಲಿರುತ್ತದೆ. ಈ ವೇಳೆ ಮಾಂಸಾಹಾರ ಸೇವಿಸುವಂತಿಲ್ಲ.

ಆದರೆ ಅದಕ್ಕೂ ಮುನ್ನ ಇಲ್ಲಿನ ಜನರು, ಕಂಠಪೂರ್ತಿ ಕುಡಿದು, ಹೊಟ್ಟೆ ತುಂಬಾ ಮಾಂಸ ತಿಂದು, ಹಾಡು ಕುಣಿತದಲ್ಲಿ ಮೈ ಮರೆಯುತ್ತಾರೆ. ಇದನ್ನೇ ಹಬ್ಬದ ರೀತಿಯಲ್ಲಿ ಆಚರಿಸುತ್ತಾರೆ. ಇವರು ತಿನ್ನುವ ವೈಭೋಗ ನೋಡಿದರೆ, ನಮ್ಮ ಮೈಸೂರು ಸೀಮೆಯ 'ಬಾಡೂಟ' ನೆನಪಾಗುತ್ತದೆ. ಇದೊಂದು ಹಬ್ಬದ